# ಅನುವಾದಿತ ಕತೆ

ಹತ್ತು ಹಸುಗಳು ನಾಲ್ಕು ಎಮ್ಮೆಗಳು ನಮ್ಮ ಹಾಲಿನ ವ್ಯಾಪಾರದ ಮೂಲಧನ. ತಟಿಕೆ ಹಾಕಿದ ದೊಡ್ಡ ಕೊಟ್ಟಿಗೆಯಲ್ಲಿ ಅವು ತಿರುಗಾಡುತ್ತವೆ. ಅಮ್ಮನೂ ಮೂವರು ಅತ್ತೆಯರೂ ಅಜ್ಜಿಯೂ ಮುಂಜಾವಿನಿಂದ ಮುಸ್ಸಂಜೆಯವರೆಗೆ ಆ ಕೊಟ್ಟಿಗೆಯೊಳಗೆ ಕೆಲಸ ಮಾಡುತ್ತಲೇ ಇರುತ್ತಾರೆ. ಸಣ್ಣಸಣ್ಣ ಬಕೆಟ್ಟುಗಳಲ್ಲಿ ಅವರು ಕರೆದು ತರುವ ಹಾಲನ್ನು ಅಂಡೆಯಲ್ಲಿ ತುಂಬುತ್ತಲೇ ಇರುತ್ತಾರೆ. ಬೇರೆಬೇರೆ ಪಾತ್ರೆಗಳಲ್ಲಿ ಹಾಲನ್ನು ಅಳೆದು ಅಂಗಡಿಗಳಿಗೆ ತೆಗೆದುಕೊಂಡು ಹೋಗುವ ಕೆಲಸವನ್ನು ಏಳುಮಲೈಯೂ ಕಾಳಿಮುತ್ತುವೂ ಮಾಡುತ್ತಾರೆ.

ಹೋಟೆಲ್ ಲೆಕ್ಕವನ್ನು ಒಂದು ನೋಟ್ ಪುಸ್ತಕದಲ್ಲೂ, ಗಿರಾಕಿಗಳ ಲೆಕ್ಕವನ್ನು ಮತ್ತೊಂದು ದೊಡ್ಡ ನೋಟ್ ಪುಸ್ತಕದಲ್ಲೂ ಪ್ರತ್ಯೇಕ ಪುಟಗಳಲ್ಲಿ ನಾನು ಬರೆದಿಡುತ್ತಿದ್ದೆ. ಅದು ಅಪ್ಪನಿಗೆ ಬಹಳ ಅನುಕೂಲವಾಗಿರುತ್ತಿತ್ತು. ತಿಂಗಳು ಶುರುವಾದಕೂಡಲೇ ಪ್ರತಿಯೊಂದು ಹೋಟೆಲಿಗೂ ಹೋಗಿ ನೋಟ್ ಪುಸ್ತಕವನ್ನು ತೋರಿಸಿ ಹಣ ವಸೂಲಿ ಮಾಡುತ್ತಾ ಇದ್ದರು. 'ಎಷ್ಟು ಅಚ್ಚುಕಟ್ಟಾಗಿ ಬರೆದಿಟ್ಟಿದ್ದಾನೆ ಎಂದು ರೆಡ್ಡಿಯವರೇ ಮೆಚ್ಕೊಂಡ್ರು ಕಣೇ' ಎಂದು ಅಮ್ಮನ ಬಳಿ ಅಪ್ಪನೇ ಹೆಮ್ಮೆಯಿಂದ ಹೇಳಿದ್ದನ್ನು ಕೇಳಿರುವುದಾಗಿ ಅತ್ತೆಯರೆಲ್ಲರೂ ನನ್ನ ಬಳಿ ಹಲವು ಸಲ ಹೇಳಿದ್ದುಂಟು. ಅದನ್ನು ಕೇಳಿ ಒಳೊಳಗೆ ಖುಷಿಯಾದರೂ ಅಮ್ಮನಿಂದ ಮೆಚ್ಚಿಗೆ ಪಡೆಯಲಾಗಲಿಲ್ಲವಲ್ಲ ಎಂಬ ಕೊರಗು ನನ್ನ ಮನದಲ್ಲಿ.

'ಎರಡು ಸೇರು ಹಸುವಿನ ಹಾಲು ಹುಯ್ಯಿ ಮಾಪ್ಪಿಳ್ಳೆ' ಎಂದು ಹೇಳುತ್ತಲೇ ಬಂದ ಜುಟ್ಟಿನ ಮಾಮ ಅಲ್ಯೂಮಿನಿಯಂ ಚೊಂಬನ್ನು ಎಂಟಾಣೆ ನಾಣ್ಯವನ್ನು ದಿಣ್ಣೆಯ ಮೇಲಿಟ್ಟು ಅಪ್ಪನ ಬಳಿ ಮಾತನಾಡಲು ತಿರುಗಿದರು. ಮೀಸೆಯೂ ಗಡ್ಡವೂ ಇಲ್ಲದ ಅವರ ಮುಖ ನೋಡಲು ಯಾವಾಗಲೂ ನುಣ್ಣಗೆ ಇರುವುದು. ಜನಪದ ಆಟಗಳಲ್ಲಿ ಹೆಣ್ಣಿನ ಪಾತ್ರ ಧರಿಸಿ ನಟಿಸುವವರು ಮಾಮಾ. ವೀಳ್ಯವನ್ನು ಬಾಯಿಯ ಒಂದು ಪಕ್ಕದಲ್ಲಿ ಅಡಗಿಸಿಕೊಂಡು ಗಲ್ಲವನ್ನು ತೋಳಿಗೆ ತಿವಿದು ತಿವಿದು ಅವರು ಮಾತನಾಡುವಾಗ ಅಸಲು ಹೆಣ್ಣಿನಂತೆಯೇ ಕಾಣುತ್ತಾರೆ. "ಹೋದ ವಾರ ಪೂರ್ತಿ ಆಸಾಮಿಯನ್ನು ಕಾಣಲಿಲ್ಲವಲ್ಲ, ಯಾವ ಊರಲ್ಲೋ ಆಟ?" ಎಂದು ಅಪ್ಪ ಕೇಳಿದರು. "ನಾನೇನು ಅಂಥಾ ದೊಡ್ಡ ಆಟಗಾರನೇ, ಸೀಮೆ ಬಿಟ್ಟು ಸೀಮೆ ಹೋಗಿ ಆಡೋದಿಕ್ಕೆ? ಬರಿ ಹೆಣ್ಣು ಪಾತ್ರ ಮಾಡೋನು ತಾನೇ? ಅಯ್ಯೋ! ಇಲ್ಲಿರೋ ಕಾಳಪಟ್ಟಿಗೆ ಹೋಗಿದ್ದೆ. ನಾಲ್ಕು ದಿನ ಆಟ" ಎಂದು ಹೇಳಿ "ಎರಡು ವೀಳ್ಯ ಅಡಿಕೆ ಇದ್ರೆ ಕೊಡಿ" ಎಂದು ಕೈನೀಡಿದರು. "ಒಳ್ಳೆ ಕಾಲ ಬಂದ್ರೆ, ಸೀಮೆಗೂ ಹೋಗಿ ಆಡಬಹುದು, ಸಿನಿಮಾದಲ್ಲೂ ಆಡಬಹುದು. ನಂಬಿಕೆ ಮಾತ್ರ ಕಳ್ಕೋಬೇಡ" ಎಂದು ಹೇಳುತ್ತಾ ಕಂಬದ ಪಕ್ಕದಲ್ಲಿದ್ದ ಚೀಲವನ್ನು ಎಳೆದು, ಅಪ್ಪ ಮಾಮನ ಮುಂದಿಟ್ಟರು.

ಕೊಟ್ಟಿಗೆಯಿಂದ "ಹಿಡಿಯೇ ಅದನ್ನ, ತುಂಡುಬಾಲ ಓಡ್ತಿದೆ ನೋಡು" ಎಂದು ದಿಢೀರೆಂದು ಅಮ್ಮ ಕಿರುಚುವ ಶಬ್ದ ಕಿವಿಗೆ ಬಿತ್ತು. ನಂತರ ತೊಟ್ಟಿಗಳು ಒಡೆದ ಶಬ್ದ. "ಏನೇ ಶಬ್ದ ಅಲ್ಲಿ?" ಎನ್ನುತ್ತಾ ತರಾತುರಿಯಿಂದ ಪಂಚೆಯನ್ನು ಸರಿಪಡಿಸಿ ಕಟ್ಟಿಕೊಳ್ಳುತ್ತಾ ಅಪ್ಪ ಕೊಟ್ಟಿಗೆಗೆ ಹೋದರು. ಹಾಲು ಕೊಂಡುಕೊಂಡ ಅಕ್ಕನಿಗೆ ಚಿಲ್ಲರೆಯನ್ನು ಎಣಿಸಿಕೊಟ್ಟು ನಾನೂ ಹಿಂದೆಯೇ ಓಡಿದೆ. ಅತ್ತೆಯರೂ ಅಮ್ಮನೂ ಒಬ್ಬರನ್ನೊಬ್ಬರು ಮೌನವಾಗಿ ನೋಡುತ್ತಿರಲು, ಹಿಡಿತದಿಂದ ತಪ್ಪಿಸಿಕೊಂಡು ಓಡಿದ ಕರು ಹಸುವಿನ ಮಡಿಲಲ್ಲಿ ಬಾಯಿಟ್ಟು ಗುದ್ದಿ, ಗುದ್ದಿ ಹಾಲನ್ನು ಕುಡಿಯುತ್ತಿತ್ತು. ಬಿದಿರಿನ ಅಟ್ಟದಲ್ಲಿ ಇಟ್ಟಿದ್ದ ಹುಲ್ಲಿನ ಹೊರೆಗಳು ಸರಿದು ಕೆಳಗೆ ಬಿದ್ದಿದ್ದವು. ಸಗಣಿಯ ಕುಕ್ಕೆಗಳು ಕೊಟ್ಟಿಗೆಯ ಹೊರಗೆ ಉರುಳಿಹೋಗಿದ್ದವು. ಎರಡು ಮಣ್ಣಿನ ತೊಟ್ಟಿಗಳು ಒಡೆದು ಹೋಗಿದ್ದವು. "ತಿನ್ನು ಅಂದ್ರೆ ಸರಿಯಾಗಿ ತಿಂತೀಯ ಒಂದು ಕರುವನ್ನ ಹಿಡಿಯೋ ತಾಕತ್ತಿಲ್ಲ? ಬಾಯಿ ಬಡಿಕ ಆದ್ರೆ ಮಾತ್ರ